## ವಾರ್ತಾ ವಿಶ್ಲೇಷಣೆ

# ಜಾಗತೀಕರಣ ಮತ್ತು ರಾಜಕಾರಣ

ಮನುಷ್ಯನ ಜೀವನಕ್ಕೆ ಸ್ಥಿರತೆ ಅತ್ಯಗತ್ಯ. ಸ್ಥಿರತೆಗೆ ಎರಡು ಮುಖಗಳಿವೆ: ವ್ಯಷ್ಟಿ ಮತ್ತು ಸಮಷ್ಟಿ. ವ್ಯಕ್ತಿಯೊಬ್ಬನ ಆಧ್ಯಾತ್ಮಿಕ ಮತ್ತು ನೈತಿಕ ಪ್ರಜ್ಞಾವಸ್ಥೆಗಳು ಅವನ ವೈಯಕ್ತಿಕ ಸ್ಥಿರತೆಯ ದ್ಯೋತಕಗಳು. ಸಮಷ್ಟಿಯ ದೃಷ್ಟಿಯಿಂದ ನೋಡುವುದಾದರೆ, ಸ್ಥಿರತೆ ಹತ್ತುಹಲವು ಅಂಶಗಳ ಮೇಲೆ ಅವಲಂಬಿತವಾಗಿದೆ. ಅವುಗಳಲ್ಲಿ ಮುಖ್ಯವಾದವು, ಧಾರ್ಮಿಕ ಸ್ಥಿರತೆ, ಸಾಮಾಜಿಕ ಸ್ಥಿರತೆ, ಆರ್ಥಿಕ ಸ್ಥಿರತೆ ಮತ್ತು ರಾಜಕೀಯ ಸ್ಥಿರತೆ.

ರಾಜಕೀಯವೆಂದರೆ ಜೀವನಾವಶ್ಯಕ ಸೌಲಭ್ಯಗಳನ್ನು ಮತ್ತು ವ್ಯವಸ್ಥೆಗಳನ್ನು ಎಲ್ಲರಿಗೂ ಮುಟ್ಟಿಸುವ ನಿಟ್ಟಿನಲ್ಲಿ ರಚಿತವಾದ ಆಳ್ವಿಕೆಯ ವ್ಯವಸ್ಥೆ ಮಾತ್ರ. ಅದು ಸಮಾಜದ ಇನ್ನಿತರ ಅಂಶಗಳಿಗೆ ಭದ್ರತೆಯನ್ನು, ಸ್ಥಿರತೆಯನ್ನು ನೀಡುವ ಸಾಧನ. ರಾಜಕೀಯ ವ್ಯವಸ್ಥೆ ಮಾನವ ಇತಿಹಾಸದಲ್ಲಿ ಮೂಡಿ ಬಂದದ್ದು ಹೀಗೆ.

ಮಾನವನ ನಾಗರಿಕತೆ ಬೆಳೆದಂತೆಲ್ಲ, ಹಲವು ಬಗೆಯ ರಾಜಕೀಯ ವ್ಯವಸ್ಥೆಗಳು ಹುಟ್ಟಿಕೊಂಡವು. ಅವುಗಳ ಹಿಂದೆ ಹಲವು ಸಿದ್ಧಾಂತಗಳೂ ಮೂಡಿದವು. ಬರಬರುತ್ತ ಸಿದ್ಧಾಂತಗಳ ಮಾರ್ಗದರ್ಶನದಲ್ಲಿ ಒಂದು ಪ್ರದೇಶದ ಜನರನ್ನು ಆಳುವ ವ್ಯವಸ್ಥೆ ರೂಪುಗೊಂಡಿತು. ನಿಧಾನವಾಗಿ, ಸಿದ್ಧಾಂತಗಳ ನಡುವೆ, ನಂತರ ಆ ಸಿದ್ಧಾಂತಗಳನ್ನು ಪ್ರತಿಪಾದಿಸುವವರ ನಡುವೆ ಘರ್ಷಣೆಗಳು ಆರಂಭಗೊಂಡವು. ಪ್ರತಿಯೊಂದು ಸಿದ್ಧಾಂತವೂ ತಾನು ಮಾತ್ರ ಜನರ ಹಿತಾಸಕ್ತಿಯನ್ನು ಎಲ್ಲ ರೀತಿಯಲ್ಲಿಯೂ ಕಾಪಾಡಲು ಸಮರ್ಥ ಎಂದು ಹೇಳಿಕೊಳ್ಳಲಾರಂಭಿಸಿತು. ಅದರ ಅನುಯಾಯಿಗಳು ಕೂಡ, ತಾವೇ ಜನರನ್ನು ಆಳಲು ಯೋಗ್ಯ, ಎಂದು ಪ್ರತಿಪಾದಿಸಲಾರಂಭಿಸಿದರು.

ಸಿದ್ಧಾಂತದ ಪ್ರತಿಪಾದನೆ, ನಿಧಾನವಾಗಿ, ಕೇವಲ ಅಧಿಕಾರ ಗಳಿಕೆಯ ಸಾಧನವಾಗಿ ಅವಸಾನವನ್ನು ಹೊಂದಿತು. ಸಿದ್ಧಾಂತ ಹಿಂದುಳಿದು, ಅಧಿಕಾರ ಗಳಿಕೆಯೇ ಪ್ರಧಾನವಾಯಿತು. ಅಧಿಕಾರ ಗಳಿಕೆಗೆ ಸಿದ್ಧಾಂತವನ್ನು ತಿರುಚುವ ಪ್ರಕ್ರಿಯೆಯೂ ಆರಂಭವಾಯಿತು. ಈ ಹಂತದಲ್ಲಿ ಎಲ್ಲ ರಾಜಕೀಯ ಸಿದ್ಧಾಂತಗಳೂ ತಮ್ಮ ಮೊದಲಿನ ವರ್ಚಸ್ಸನ್ನೂ ಪರಿಶುದ್ಧತೆಯನ್ನೂ ಕಳೆದುಕೊಂಡು, ಅದರ ಅನುಯಾಯಿಗಳ ಭಾಷಣಗಳ ವಸ್ತುವಿಷಯವಾಗಿ ಕಳೆಗುಂದಿದವು.

ಒಂದು ಪ್ರದೇಶಕ್ಕೆ ಸೀಮಿತವಾದ ರಾಜಕೀಯ ವ್ಯವಸ್ಥೆ, ಮಾನವನಲ್ಲಿ ಜಾಗತಿಕ ಪ್ರಜ್ಞೆ ಬೆಳೆದಂತೆಲ್ಲ, ತನ್ನ ಪರಿಧಿಯನ್ನು ವಿಸ್ತಾರಗೊಳಿಸಿಕೊಂಡಿತು. ಪಾಳೇಗಾರತನದಿಂದ ಚಕ್ರಾಧಿಪತ್ಯದ ವರೆಗೆ, ಅಧಿಕಾರ ವಿಸ್ತರಗೊಂಡಿತು. ಅದರ ಜೊತೆಗೆ, ಪ್ರಾದೇಶಿಕ ಹಿತಾಸಕ್ತಿಗಳು ಒಟ್ಟು ರಾಜ್ಯಾಡಳಿತದ ಹಿತಾಸಕ್ತಿಗಳಿಗೆ ಬದ್ಧವಾಗಿರಬೇಕೆಂಬ ಅಲಿಖಿತ ನಿಯಮ ರೂಪುಗೊಂಡಿತು. ಹದಿನೆಂಟನೆಯ ಶತಮಾನದಲ್ಲಿ ವಸಾಹತುಶಾಹಿ ದೇಶಗಳು ಈ ನಿಯಮದ ಹಿನ್ನಲೆಯಲ್ಲೇ, ತಾವು ವಶಪಡಿಸಿಕೊಂಡಿದ್ದ ರಾಷ್ಟ್ರಗಳ ಹಿತಕ್ಕಿಂತಲೂ, ತಮ್ಮ ಹಿತವೇ ಶ್ರೇಷ್ಠ ಎಂಬ ಮನೋಧಾರಣೆಯಿಂದ ಆಡಳಿತ ಮಾಡಿದವು.

ಇಪ್ಪತ್ತನೆಯ ಶತಮಾನದಲ್ಲಿ ವಸಾಹತುಶಾಹಿಗೆ ವಿಶ್ವದೆಲ್ಲೆಡೆ ವಿರೋಧ ಕಂಡುಬಂದು, ಅದು ಅಸ್ತಂಗತವಾಯಿತು. ಆದರೆ, ಅದು ವಶಗೊಂಡಿದ್ದ ದೇಶಗಳ ಪ್ರಜ್ಞೆಯ ಮೇಲೆ ಇನ್ನೂ ಉಳಿದಿರುವ ಗಾಯಗಳನ್ನು ಬಿಟ್ಟುಹೋಗಿದೆ. ರಾಜಕೀಯ ಸ್ವಾತಂತ್ರ್ಯ ಬರಿಯ ನೆಪಮಾತ್ರವಾಗಿ, ಆರ್ಥಿಕವಾಗಿ ಶ್ರೀಮಂತ ದೇಶಗಳನ್ನು ಅವಲಂಬಿಸುವ ಪ್ರವೃತ್ತಿ ಬೆಳೆದಿದೆ. ಇದರಿಂದ ಆಯಾ ದೇಶಗಳ ರಾಜಕೀಯ ವ್ಯವಸ್ಥೆ ಸತ್ವಹೀನವಾಗಿ, ಆರ್ಥಿಕ ಆವಶ್ಯಕತೆಗಳ ಮೇಲೆ ನಿರ್ಭರವಾಗುವ ಪ್ರವೃತ್ತಿ ಬೆಳೆಯುತ್ತಿದೆ.

ಈ ಅಸಹಾಯಕ ಪ್ರವೃತ್ತಿಯನ್ನು ಶ್ರೀಮಂತ ದೇಶಗಳು ತಮ್ಮ ಪ್ರಯೋಜನಕ್ಕೆ ಬಳಸಿಕೊಳ್ಳುತ್ತಿವೆ. ಒಂದು ಕಡೆಯಲ್ಲಿ ಆರ್ಥಿಕ ಸಹಾಯ ಮಾಡುತ್ತಿದ್ದರೂ, ಮತ್ತೊಂದೆಡೆ, ತಮ್ಮ ಉತ್ಪನ್ನಗಳು ಮತ್ತು ಸೇವೆಗಳ ಮಾರುಕಟ್ಟೆ ತಾಣಗಳಾಗಿ ಬಡ ದೇಶಗಳನ್ನು ಬಳಸಿ ಕೊಳ್ಳುತ್ತಿವೆ. ಇಲ್ಲಿ ಶ್ರೀಮಂತದೇಶಗಳ ಹಿತಾಸಕ್ತಿಗಳೇ ಪ್ರಾಧಾನ್ಯ. ಇದಕ್ಕಾಗಿ, ಹಲವು ದೇಶಗಳಲ್ಲಿ ರಾಜಕೀಯ ಅಸ್ಥಿರತೆಯನ್ನು ಉಂಟುಮಾಡಲೂ ಅಮೆರಿಕೆಯಂತಹ ಶ್ರೀಮಂತ ದೇಶಗಳು ಹೇಸುತ್ತಿಲ್ಲ ಎನ್ನುವುದು ಎಲ್ಲರಿಗೂ ತಿಳಿದ ವಿಷಯವೇ.

ಹೀಗೆ ಭದ್ರತೆ ಮತ್ತು ಸ್ಥಿರತೆಗಾಗಿ ರೂಪುಗೊಂಡ ರಾಜಕೀಯ ವ್ಯವಸ್ಥೆ, ಸಿದ್ಧಾಂತವಿಹೀನವಾಗಿ, ಕೇವಲ ಆರ್ಥಿಕ ಪ್ರಧಾನವಾಗಿ ಬಿಟ್ಟಿರುವುದು ಜಾಗತೀಕರಣ ಯುಗದ ದೊಡ್ಡ ದುರಂತ. ಇದಷ್ಟೇ ಅಲ್ಲ, ಇನ್ನೂ ಅಧಃಪತನಗೊಂಡು, ರಾಜಕೀಯ ವ್ಯಕ್ತಿಪ್ರಧಾನವಾಗುವ ಪ್ರಕ್ರಿಯೆಯನ್ನು ನಮ್ಮ ದೇಶದಲ್ಲಿ ಹಿಂದೆಂದಿಗಿಂತಲೂ ಹೆಚ್ಚಾಗಿ ನೋಡುತ್ತಿದ್ದೇವೆ. ವ್ಯಕ್ತಿಪ್ರಧಾನ ರಾಜಕೀಯ ವ್ಯವಸ್ಥೆಯಲ್ಲಿ, ವ್ಯಕ್ತಿಯ ಅಹಂ, ಸ್ವಾರ್ಥ ಮತ್ತು ಪೂರ್ವಾಗ್ರಹಗಳೇ ಪ್ರಧಾನವಾಗುತ್ತವೆಯೇ ಹೊರತು, ಸಮಷ್ಟಿಯ ಹಿತ ಹಿಂಜರಿಯುತ್ತದೆ. ಆಗ ರಾಜಕೀಯ ತನ್ನ ಮೂಲಭೂತ ಆಶಯವನ್ನೇ ಬಿಟ್ಟುಕೊಟ್ಟು ಕೇವಲ ಅಧಿಕಾರದ ಗಳಿಕೆ ಮತ್ತು ದುರ್ಬಳಕೆಯಾಗಿ ಬಿಡುತ್ತದೆ.

ಸಭ್ಯ ಜನ ಈ ವಿಕೃತಿಗಳ ಮೂಕ ಪ್ರೇಕ್ಷಕರಾಗಿದ್ದಾರೆ. ಅಸಭ್ಯ ವ್ಯವಸ್ಥೆ ಮತ್ತು ವ್ಯಕ್ತಿಗಳ ದೊಂಬಿಯಲ್ಲಿ ಸಭ್ಯ ವ್ಯಕ್ತಿಗಳ ಹಿತನುಡಿಗಳು ಅರಣ್ಯರೋದನವಾಗಿವೆ. ಪರಿಸ್ಥಿತಿ ಹೀಗೇ ಮುಂದುವರಿಯಲು ಬಿಟ್ಟು ಸರ್ವನಾಶಕ್ಕೆ ಎಡೆಕೊಡಬೇಕೇ? ಯೋಚಿಸಿ ನೋಡಿ.